**243 ಶ್ರೀ ಸಂಪಂಗಿ.ಎನ್.ಬಾಗೇಪಲ್ಲಿ**
**ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.**

1 ಚಿಕ್ಕಬಳ್ಳಾಪುರ ಜಿಲ್ಲೆಯ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದ್ದಿದಲ್ಲಿ ಯಾವ ಯೋಜನೆಗಳಲ್ಲಿ ಕುಡಿಯುವ ನೀರನ್ನು ಪೂರೈಸಲಾಗುವುದು (ಪ್ರತಿ ತಾಲ್ಲೂಕಿನ ಪಟ್ಟಣವಾರು ವಿವರಣೆ ನೀಡುವುದು).

–ಹೌದು–

ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ನಗರ/ಪಟ್ಟಣಗಳು ಇದ್ದು, ನೀರು ಸರಬರಾಜಿನ ವ್ಯವಸ್ಥೆ ಕೆಳಕಂಡಂತಿದೆ.

**ಬಾಗೇಪಲ್ಲಿ:**

ಚಿತ್ರಾವಳಿ ಬ್ಯಾರೇಜ್‌ನಿಂದ ನೀರನ್ನು ಪಡೆದು ಶುದ್ಧೀಕರಿಸಿ ಮಾರ್ಚ್ – 2006 ರಿಂದ 1.70 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲು ಒದಗಿಸಲಾಗುತ್ತಿದೆ.

**ಗುಡಿಬಂಡೆ:**

ಚಿತ್ರಾವಳಿ ಬ್ಯಾರೇಜ್‌ನಿಂದ ನೀರನ್ನು ಪಡೆದು ಶುದ್ಧೀಕರಿಸಿ ಮಾರ್ಚ್–2006 ರಿಂದ 0.70 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

**ಗೌರಿಬಿದನೂರು:**

ಪ್ರಸ್ತುತ ಕೊಳವೆ ಬಾವಿಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಉತ್ತರ ಪಿನಾಕಿನಿಗೆ ಅಡ್ಡಲಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟೆಯ ಮೂಲದಿಂದ 6.21 ಎಂ.ಎಲ್.ಡಿ. ಸಾಮರ್ಥ್ಯದ ಯೋಜನೆಯನ್ನು ಅಂದಾಜು ವೆಚ್ಚ ರೂ.499.00 ಲಕ್ಷಗಳ ಅಡಿಯಲ್ಲಿ ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

**ಚಿಕ್ಕಬಳ್ಳಾಪುರ:**

ಕೊಳವೆ ಬಾವಿಗಳಿಂದ ಸುಮಾರು 3.40 ದಶಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ಜಕ್ಕಲಮಡಗು ಜಲಾಶಯವನ್ನು ಅಭಿವೃದ್ಧಿಪಡಿಸಿ, 14.85 ಎಂ.ಎಲ್.ಡಿ. ನೀರನ್ನು ಸರಬರಾಜು ಮಾಡಲು ರೂ. 2700.00 ಲಕ್ಷಗಳ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಡಿಸೆಂಬರ್–2008ರಲ್ಲಿ ಪ್ರಾರಂಭಿಸಲಾಗುವುದು.

**ಶಿಡ್ಲಘಟ್ಟ:**

ಪಟ್ಟಣದ ಸಮೀಪದಲ್ಲಿ ಯಾವುದೇ ಶಾಶ್ವತ ನೀರಿನ ಮೂಲವಿಲ್ಲದಿರುವ ಕಾರಣ, ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

**ಚಿಂತಾಮಣಿ:**

. ಚಿಂತಾಮಣಿ ನಗರಕ್ಕೆ ಕನ್ನಂಪಲ್ಲಿ ಕೆರೆಯಿಂದ ಮತ್ತು ಕೊಳವೆ ಬಾವಿಗಳಿಂದ ಸುಮಾರು 3.85 ದಶಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ನೆಕ್ಕುಂದಿ ಕೆರೆಯ ಮೂಲದಿಂದ 1.62 ಎಂ.ಎಲ್.ಡಿ. ಹೆಚ್ಚುವರಿ ನೀರುನ್ನೊದಗಿಸುವ ರೂ.442.00 ಲಕ್ಷಗಳ ಯೋಜನೆಯು ಪ್ರಗತಿಯಲ್ಲಿದ್ದು 2009–10ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

2 ನೇತ್ರಾವತಿ ನದಿಯಿಂದ ಹಾಗೂ ಭದ್ರಾ ಮೇಲ್ದಂಡೆ ಯೋಜನೆಯಿಂದ ಕುಡಿಯುವ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆಗೆ ಒದಗಿಸಲಾಗುವುದೇ? ಹಾಗಿದ್ದಲ್ಲಿ, ಯಾವಾಗ ಮತ್ತು ಇದಕ್ಕೆ ತೆಗೆದುಕೊಂಡಿರುವ ಕ್ರಮಗಳೇನು; ಇದಕ್ಕೆ ತಗಲುವ ವೆಚ್ಚವೆಷ್ಟು?

ಭದ್ರಾ ಮೆಲ್ದಂಡೆ ಯೋಜನೆಯಿಂದ ಚಿಕ್ಕಬಳ್ಳಾಪುರ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸುವ ಯಾವ ಪ್ರಾಸ್ತಾವನೆ ಇರುವುದಿಲ್ಲ.

ನೇತ್ರಾವತಿ ನದಿಯನ್ನೊಳಗೊಂಡ ಪಶ್ಚಮಾಭಿಮುಖವಾಗಿ ಹರಿಯುವ ನದಿಗಳ ನೀರಿನ ಬಗ್ಗೆ ಅಧ್ಯಯನ ಕೈಗೊಂಡು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಜಲಸಂಪನ್ಮೂಲ ಇಲಾಖೆಯಿಂದ ಎನ್.ಆರ್.ಎಸ್.ಸಿ. ಸಂಸ್ಥೆ, ಹೈದ್ರಾಬಾದ್ ಇವರಿಗೆ ವಹಿಸಲಾಗಿದೆ. ಇದರ ಅಂದಾಜು ವೆಚ್ಚ ರೂ.15.494 ಕೋಟಿಗಳಾಗಿದ್ದು, ದಿನಾಂಕ: 12.09.2003 ರಂದು ಒಡಂಬಡಿಕೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಅಧ್ಯಯನವು ಪೂರ್ಣಗೊಂಡಿರುವುದಿಲ್ಲ.

**244 ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ)**

**ಮಾನ್ಯ ಮುಖ್ಯಂತ್ರಿಯವರು**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟಿರುವ ಹಳ್ಳಿಗಳು, ಪಟ್ಟಣ ಪಂಚಾಯಿತಿ, ನಗರಸಭೆ ಪುರಸಭೆಗಳು ಯಾವುದು? (ಪ್ರತಿಯೊಂದು ಹಳ್ಳಿಗಳ ವಿವರಗಳನ್ನು ಒದಗಿಸುವುದು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟಿರುವ ಹಳ್ಳಿಗಳು ಪಟ್ಟಣ ಪಂಚಾಯಿತಿ ನಗರಸಭೆ ಮತ್ತು ಪುರಸಭೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರಸ್ತೆಗಳ ಅಗಲೀಕರಣಕ್ಕಾಗಿ ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳಲಾಗಿದೆ, ಇದುವರೆವಿಗೂ ಎಷ್ಟು ಕಿ.ಮೀ. ರಸ್ತೆ ಅಗಲೀಕರಣವಾಗಿದೆ. ಹಾಗೂ ಮುಂದೆ ರಸ್ತೆ ಅಗಲೀಕರಣವಾಗುವ ರಸ್ತೆಗಳು ಯಾವುವು (ವಿವರ ನೀಡುವುದು)

1. ರಸ್ತೆ ಅಗಲೀಕರಣ ಕೋಶ ವ್ಯಾಪ್ತಿ ಅಡಿಯಲ್ಲಿ 91 ರಸ್ತೆಗಳನ್ನು (ವರ್ಗಾವಣೆ ಅಭಿವೃದ್ಧಿ ಹಕ್ಕು ಅಡಿಯಲ್ಲಿ) ಅಗಲೀಕರಣಗೊಳಿಸಲು ಗುರುತಿಸಿದ್ದು